155 ನೇ ಸ. ನಿ:330: (69) 22/04

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ರವಿಕುಮಾರ್ ಇವರು ನಿಯಮ 330 ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 69 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ:**

**ವಿಷಯ :** ಸ್ಮಾರ್ಟ್ ಪ್ರೀ ಪೈಡ್ ಮೀಟರ್ ಹಾಗೂ ಸ್ಮಾರ್ಟ್ ಪೋಸ್ಟ್ ಪೈಡ್ ಮೀಟರ್ ಅಳವಡಿಸಲು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಇರುವ ನಿಯಮಗಳು ಹಾಗೂ ಹೊಸ ವಿದ್ಯುತ್ ಸಂಪರ್ಕಗಳಿಗೆ ಸ್ಮಾರ್ಟ್ ಪ್ರೀ ಪೈಡ್ ಮೀಟರ್ ಹಾಗೂ ಸ್ಮಾರ್ಟ್ ಪೋಸ್ಟ್ ಪೈಡ್ ಮೀಟರ್ ಕಡ್ಡಾಯದ ಕುರಿತು ಚರ್ಚಿಸಲು ಅವಕಾಶ ನೀಡುವಂತೆ ಮಾನ್ಯ ಇಂಧನ ಸಚಿವರಲ್ಲಿ ಪ್ರಸ್ತಾಪಿಸಿರುವ ಬಗ್ಗೆ.

*****

**ಉತ್ತರ** :- ಸ್ಮಾರ್ಟ್ ಪ್ರೀ ಪೇಯ್ಡ್ ಮೀಟರ್ ಹಾಗೂ ಸ್ಮಾರ್ಟ್ ಪೋಸ್ಟ್ ಪೇಯ್ಡ್ ಮೀಟರ್ ಅಳವಡಿಸಲು ಕೇಂದ್ರ ಸರ್ಕಾರ ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿಯಮಗಳು ಈ ಕೆಳಕಂಡಂತಿವೆ:

**ಕೇಂದ್ರ ವಿದ್ಯುತ್ ಮಂತ್ರಾಲಯದ ಅಧಿಸೂಚನೆ ದಿನಾಂಕ: 23.05.2022**
ಸಂವಹನ ಜಾಲವಿರುವ ಪ್ರದೇಶಗಳಲ್ಲಿನ ಎಲ್ಲಾ ಗ್ರಾಹಕರಿಗೆ (ಕೃಷಿ ಗ್ರಾಹಕರನ್ನು ಹೊರತುಪಡಿಸಿ) ದಿನಾಂಕ: 31.03.2025 ರೊಳಗೆ ಪೂರ್ವ-ಪಾವತಿ ಮೋಡ್‌ನಲ್ಲಿ (Pre paid Mode) ಕಾರ್ಯನಿರ್ವಹಿಸುವ ಸ್ಮಾರ್ಟ್ ಮೀಟರ್‌ಗಳ ಮೂಲಕ ವಿದ್ಯುತ್ ಸರಬರಾಜು ಮಾಡುವುದು.

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನ ಪತ್ರದ ದಿನಾಂಕ: 06.02.2024**: - ದಿನಾಂಕ:01.04.2024 ರಿಂದ ಅನ್ವಯವಾಗುವಂತೆ ವಿ.ಸ.ಕಂ ಗಳಲ್ಲಿ ಎಲ್ಲಾ ಹೊಸ ಸ್ಥಾವರಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸುವಂತೆ ನಿರ್ದೇಶಿಸಲಾಗಿದೆ.

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (Pre-paid Smart Metering,2024) ಅಧಿಸೂಚನೆ ದಿನಾಂಕ: 06.03.2024:-** ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧಿಸೂಚನೆಯಂತೆ ಎಲ್ಲಾ ತಾತ್ಕಾಲಿಕ ವಿದ್ಯುತ್ ಸ್ಥಾವರಗಳಿಗೆ ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್ ಗಳನ್ನು ಅಳವಡಿಸುವುದು ಕಡ್ಡಾಯವಾಗಿದ್ದು ಹಾಗೂ ಇತರೆ ವರ್ಗದ ಗ್ರಾಹಕರಿಗೆ ಐಚ್ಛಿಕವಾಗಿರುತ್ತದೆ.

ಗ್ರಾಹಕರು ಪ್ರೀ ಪೇಯ್ಡ್ ನಿಂದ ಪೋಸ್ಟ್ ಪೇಯ್ಡ್ ಗೆ ವರ್ಗಾಯಿಸಲು ಇಚ್ಛಿಸಿದ್ದಲ್ಲಿ ನಿಯಮಾನುಸಾರ ಭದ್ರತಾ ಠೇವಣಿಯನ್ನು ಪಾವತಿಸಿ, ಪೋಸ್ಟ್ ಪೇಯ್ಡ್ ಗೆ ವರ್ಗಾಯಿಸಬಹುದಾಗಿರುತ್ತದೆ.

ಸಂಖ್ಯೆ: ಎನರ್ಜಿ 75 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು